Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 Zone 1, R. I. Dist. 3182 Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 Issue - 51 14th June 2025

## Joint meeting with
## LIONS CLUB HANGLUR
### Zone 2, Region 5, Dist. 317 C

ವಿಷಯ : ನೀವು ಸುಂದರವಾಗಿ ಕಾಣಬೇಕೆ?
ಇಲ್ಲಿದೆ ಆಧುನಿಕ ಚಿಕಿತ್ಸಾ ವಿಧಾನಗಳು

By

**Rtn. Dr. ಉಮೇಶ್ ಪುತ್ರನ್**

ಸ್ಥಳ : ಫಿಲೋಮೇನಾ ಹಾಲ್, ಕೋಣಿ ರೋಡ್, ಕುಂದಾಪುರ
ಸಮಯ : ಸಂಜೆ ಗಂಟೆ 7.00ಕ್ಕೆ

**39th year of Service and Fellowship**

# ವಾರದ ವರದಿ




ವಾರದ ಸಭೆಯು ಶಿವಪ್ರಸಾದ್ ಗ್ರ್ಯಾಂಡ್ ಹೊಟೇಲ್‌ನಲ್ಲಿ ಜೂನ್ 5ನೇ ಗುರುವಾರ ನಡೆಯಿತು. ರೊ. ಸುರೇಖಾ ಪುರಾಣಿಕರು ದೇವತಾ ಪ್ರಾರ್ಥನೆಯಿಂದ ಸಭೆಗೆ ಚಾಲನೆ ನೀಡಿದರು. ಈ ವಾರವು Classification Talk ಆಗಿದ್ದುದರಿಂದ ರೊ. ರೇಗನ್ ಲೋಬೋರವರು ಅವರ ಟ್ರಾನ್ಸ್‌ಪೋರ್ಟು ಉದ್ಯಮದ ಅನುಭವ ಕಥನವನ್ನು ನಮ್ಮೊಂದಿಗೆ ಹಂಚಿಕೊಳ್ಳುವವರಾಗಿದ್ದರು. ಅಧ್ಯಕ್ಷೆಯು ಅತಿಥಿ ಹಾಗೂ ರೋಟರಿ ಮಿತ್ರರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಿದರು. ಕಾರ್ಯದರ್ಶಿಯ ಪಾತ್ರ ವಹಿಸಿದ ರೊ. ವಿವಿಯನ್ ಕ್ರಾಸ್ತಾರವರು ಕಳೆದ ವಾರದ ವರದಿಯನ್ನು ಸಭೆಗೆ ತಿಳಿಸಿದರು. ರೊ. ದೋಮ ಚಂದ್ರಶೇಖರರು ವಾರದ ಚಿಂತನೆಯಲ್ಲಿ ಖ್ಯಾತ ಹಾಸ್ಯಗಾರ ಚಾರ್ಲಿ ಚಾಪ್ಲಿನ್‌ನ ಕೆಲವು ನುಡಿಮುತ್ತುಗಳನ್ನು ತಿಳಿಸಿದರು. ರೋಟರಿ ಮಾಹಿತಿಯನ್ನು ನೀಡಿದ ರೊ. ಕೆ. ಕೆ. ಕಾಂಚನರು ರೋಟರಿ ಸದಸ್ಯನಿಗೂ ಹಾಗೂ ಒಬ್ಬ ನಿಜವಾದ ರೊಟೇರಿಯನ್ನನಿಗೂ ಇರಬೇಕಾದ ಅಂದರೆ ರೋಟರಿಯಲ್ಲಿ ಅವನ ಜವಾಬ್ದಾರಿಗಳ ಬಗ್ಗೆ ತಿಳಿಸಿದರು.

ನಂತರ ಸ್ನೇಹಜೀವಿ, ಕೊಡುಗೈದಾನಿ ಒಬ್ಬ ಶ್ರಮಜೀವಿಯಾಗಿ ಅವರ ಟ್ರಾನ್ಸ್‌ಪೋರ್ಟ್ ವೃತ್ತಿಯಲ್ಲಿ 20 ವರ್ಷಗಳ ಅನುಭವವನ್ನು ಹೊಂದಿರುವ ಈ ವಾರದ ಅತಿಥಿ ನಮ್ಮ ಕ್ಲಬ್ ಈ ವರ್ಷ ಸೇರ್ಪಡೆಗೊಂಡ ಯಶಸ್ವಿ ಉದ್ಯಮಿ ರೊ. ರೇಗನ್ ಲೋಬೋರವರನ್ನು ಅಧ್ಯಕ್ಷೆ ರೊ. ಜ್ಯುಡಿತ್ ಮೆಂಡೋನ್ಸಾ ಸಭೆಗೆ ಪರಿಚಯಿಸಿದರು.

ನಾಲ್ಕು ತಲೆಮಾರುಗಳ ಇತಿಹಾಸವನ್ನು ಹೊಂದಿರುವ ರೇಗನ್ ಲೋಬೋ ಅವರ ಟ್ರಾನ್ಸ್‌ಪೋರ್ಟ್ ಉದ್ಯಮದ ಅನುಭವ ಕಥನವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. 100 ವರ್ಷಗಳ ಹಿಂದೆ ಹಾಯಿದೋಣಿಯಲ್ಲಿ 50,000 ಹಂಚು, 10,000 ಚೀಲ ಸುಣ್ಣವನ್ನು ಗಂಗೊಳ್ಳಿಯಿಂದ ಸಾಗಾಟ ಮಾಡುತ್ತಿದ್ದು, 1977ರಲ್ಲಿ ಅವರ ತಂದೆಯವರು ಮೊದಲ ಬಾರಿಗೆ ಲಾರಿಯನ್ನು ಖರೀದಿಸಿದರು.

ಒಬ್ಬ ಯಶಸ್ವೀ ಉದ್ಯಮಿಯಾಗಲು ಭಾಷೆಯು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಯಾವ ಪ್ರದೇಶದಲ್ಲಿ ಯಾರೊಂದಿಗೆ ವ್ಯವಹಾರ ಮಾಡುತ್ತೇವೋ ಅಲ್ಲಿನ ಭಾಷೆ ತಿಳಿದಿದ್ದರೆ ಅವರೊಂದಿಗೆ ಆತ್ಮೀಯತೆಯು ಹೆಚ್ಚುತ್ತದೆ ಹಾಗೂ ಮಾಲೀಕನಾದವನಿಗೆ ತನ್ನ ಕ್ಷೇತ್ರದ ಎಲ್ಲಾ ಕೆಲಸಗಳು ತಿಳಿದಿದ್ದರೆ ಸ್ವತಃ ಎಲ್ಲವನ್ನೂ ಮಾಡಬಹುದು ಹಾಗೂ ಸಿಬ್ಬಂದಿಗಳಿಂದ ಮಾಡಿಸಬಹುದು ಎಂದು ಕಿವಿಮಾತನ್ನು ನೀಡಿದರು. ಟ್ರಾನ್ಸ್‌ಪೋರ್ಟ್ ಉದ್ಯಮದಲ್ಲೂ ಕಾರ್ಮಿಕರ ಕೊರತೆ ಇದೆ ಆದರೆ ಬಸ್ ಟ್ರಾನ್ಸ್‌ಪೋರ್ಟ್‌ಗಿಂತ ಸ್ವಲ್ಪ ಮಟ್ಟಿಗೆ ಒತ್ತಡ ಕಡಿಮೆಯ ಉದ್ಯಮವಾಗಿದ್ದು ತೆರಿಗೆ ಹಾಗೂ ವಿಮಾ ವೆಚ್ಚವು ಕಡಿಮೆ ಎಂದರು.

ವ್ಯವಹಾರದ ಅನುಭವ ಕಥನದೊಂದಿಗೆ ಅವರ ಮುಖ್ಯವಾದ ವ್ಯವಹಾರ ಕ್ಷೇತ್ರ ಸಾವಂತ್‌ವಾಡಿಯ ಬಗ್ಗೆ ತಿಳಿಸುತ್ತಾ ಅಲ್ಲಿನ ವಿಶೇಷವಾದ ಗೋಡಂಬಿಯನ್ನು ಆಗಮಿಸಿದ ರೋಟರಿ ಮಿತ್ರರಿಗೆ ಹಂಚಿದರು. 8 ರಿಂದ 10 ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುವ ಪ್ರತಿಭೆಯನ್ನು ಹೊಂದಿರುವ ವಾರದ ಅತಿಥಿ ರೊ. ರೇಗನ್ ಲೋಬೋರವರಿಗೆ ಧನ್ಯವಾದವನ್ನು ತಿಳಿಸುತ್ತಾ ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ 6–06–2025ರಂದು ತಲ್ಲೂರಿನಲ್ಲಿ ಶಾಲಾ ಮಕ್ಕಳಿಗೆ PHC ಸಿಬ್ಬಂದಿ ವರ್ಗದವರಿಂದ ನಮ್ಮ ಕ್ಲಬ್ ವತಿಯಿಂದ ನಡೆಯುವ Handwash ಕಾರ್ಯಾಗಾರಕ್ಕೆ ಸದಸ್ಯರನ್ನು ಆಹ್ವಾನಿಸಿದರು. ಹಾಗೂ ಬರುವ ವಾರದ ಸಭೆ ಗುರುವಾರದ ಬದಲಾಗಿ ಶನಿವಾರ ತಾ. 14–06–2025ರಂದು ಲಯನ್ಸ್ ಕ್ಲಬ್ ಜೊತೆ ಜಂಟಿಯಾಗಿ ನಡೆಯಲಿದ್ದು, ನಮ್ಮವರೇ ಆದ ರೊ. ಡಾ. ಉಮೇಶ್ ಪುತ್ರನ್‌ರವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಲಿದ್ದು, ಸದಸ್ಯರೆಲ್ಲರೂ ಆಗಮಿಸಬೇಕಾಗಿ ಕೇಳಿಕೊಂಡರು. ರೊ. ಸುಪ್ರೀತ್ ಚಾತ್ರಾರವರು ತಾ. 08–06–2025ರಂದು ನಡೆಯಲಿರುವ ಅವರ ಗೃಹಪ್ರವೇಶ ಕಾರ್ಯಕ್ರಮಕ್ಕೆ ಎಲ್ಲರನ್ನೂ ಪ್ರೀತಿಪೂರ್ವಕವಾಗಿ ಆಮಂತ್ರಿಸಿದರು. ರೊ. ಸತ್ಯನಾರಾಯಣ ಪುರಾಣಿಕರು ನಗೆ ಚಟಾಕಿಯನ್ನು ಸಿಡಿಸಿದರೆ, ರೊ. ಜಾನ್ಸನ್ ಅಲ್ಮೇಡಾರವರು ಧನ್ಯವಾದ ಸಮರ್ಪಣೆಗೈದರು. ಆರಂಭದ ಸ್ವಾಗತ ಭಾಷಣದಿಂದ ಧನ್ಯವಾದ ಸಮರ್ಪಣೆಯವರೆಗೂ ಹಲವಾರು ಹಾಸ್ಯದ ಮಾತುಗಳ ಜೊತೆಗೆ ಲವಲವಿಕೆಯಿಂದ ವಾರದ ಸಭೆಯು ಸಂಪನ್ನಗೊಂಡಿತು.




ತಾ. 06–06–2025ನೇ ಶುಕ್ರವಾರದಂದು ನಮ್ಮ ಕ್ಲಬ್ಬಿನ ಪ್ರಾಯೋಜಕತ್ವದಲ್ಲಿ ತಲ್ಲೂರು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ Handwash ಹಾಗೂ Basic Hygine ಬಗ್ಗೆ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಹಾಯಕಿ ಕುಮಾರಿ ರಕ್ಷಿತಾ ಅವರು ಈ ಕಾರ್ಯಾಗಾರವನ್ನು ನಡೆಸಿಕೊಟ್ಟರು. ನಮ್ಮ ಕ್ಲಬ್‌ನ ಅಧ್ಯಕ್ಷೆ ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

---




ವಿಶ್ವ ಪರಿಸರದ ಅಂಗವಾಗಿ ಸರಕಾರಿ ಪ್ರೌಢಶಾಲೆ, ತಲ್ಲೂರು ಇಲ್ಲಿನ ವಿದ್ಯಾರ್ಥಿಗಳಿಗೆ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಹಾಗೂ ರಾಷ್ಟ್ರೀಯ ಹಸಿರು ಪಡೆ – ಸಮುದಾಯ ಇಕೋ ಕ್ಲಬ್‌ನ ಜಂಟಿ ಆಶ್ರಯದಲ್ಲಿ ಪರಿಸರ ಜಾಗೃತಿಯನ್ನು ನೀಡಲಾಯಿತು.

---

*Protect the forests. They are the climate umbrellas of our planet.*

*Your 'now' is not going to be your 'forever' if you do not take care of the environment you are a part of. Save Mother Earth.*

